## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 7/2020

ಫ್ರಾಸಾ-08

ಚಾಸಾ-05

| | | |
|---|---|---|
| ಸಾಕ್ಷಿಯ ಹೆಸರು | - | ಚಂದ್ರಕಾಂತ ಕಿರೇಸೂರ |
| ತಂದೆ ಹೆಸರು | - | ಯಮನಪ್ಪ |
| ವಯಸ್ಸು | - | 25 ವರ್ಷ |
| ಉದ್ಯೋಗ | - | ಆಟೋ ಚಾಲಕ |
| ವಾಸಸ್ಥಳ | - | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 03-06-2024 |

### ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಈಗ 5-6 ವರ್ಷದ ಹಿಂದೆ ಸಬ ಅರ್ಬನ ಪೊಲೀಸರು ನನ್ನನ್ನು ಹುಬ್ಬಳ್ಳಿ ಚನ್ನಮ್ಮ ಸರ್ಕಲ ಹತ್ತಿರ ಕರೆಸಿದ್ದರು. ಪೊಲೀಸರು ನನ್ನನ್ನು ಪಂಚನೆಂದು ಬಾಗಲಕೋಟೆ ರಸ್ತೆಯಲ್ಲಿರುವ ಗದ್ದನಕೇರಿ ಕ್ರಾಸಗೆ ಕರೆದುಕೊಂಡು ಹೋದರು. ಕಾರಿನಲ್ಲಿ ನಾನು ಮತ್ತು ಪೊಲೀಸರು ಇದ್ದೆವು. ಗದ್ದನಕೇರಿ ಕ್ರಾಸನಲ್ಲಿ ಒಂದು ಬಿಳಿಯ ಕಾರು ಇತ್ತು. ಸದರಿ ಕಾರಿನಲ್ಲಿ 2-3 ಜನರು ಇದ್ದರು. ಆದಿನ ಕಾರಿನಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ-1 ಮತ್ತು 2 ರವರು ಇದ್ದರೋ ಎನ್ನುವುದು ನನಗೆ ಗೊತ್ತಿಲ್ಲ. ಪೊಲೀಸರು ಕಾರಿನಲ್ಲಿದ್ದ ವ್ಯಕ್ತಿಗಳನ್ನು ಕಾರಿನಿಂದ ಹೊರಗೆ ಕರೆದು ಡಿಕ್ಕಿಯಲ್ಲಿದ್ದ ಎನೆನೋ ವಸ್ತುಗಳನ್ನು ತೆಗೆದುಕೊಂಡು ಫೋಟೊ ತೆಗೆದರು. ಡಿಕ್ಕಿಯಲ್ಲಿದ್ದ ಚೀಲದಲ್ಲಿ ಎನಿತ್ತು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನಮ್ಮನ್ನು ಕಾರಿನಲ್ಲಿದ್ದವರನ್ನು ಚೀಲ ಸಮೇತ ನಿಲ್ಲಿಸಿ ಫೋಟೊ ತೆಗೆದುಕೊಂಡಿದ್ದಾರೆ . ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದಾರೆ. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ಈಗಾಗಲೇ ನಿಶಾನೆ ಪಿ-59 ಎಂದು ಗುರುತಿಸಲಾಗಿದೆ. ಪೊಲೀಸರು ತೆಗೆದ ಫೋಟೊಗಳನ್ನು ಗುರುತಿಸುತ್ತೇನೆ. ಸದರಿ ಫೋಟೊಗಳನ್ನು

ನಿಶಾನೆ ಪಿ–60 ರಿಂದ 73 ಎಂದು ಗುರುತಿಸಲಾಗಿದೆ. ಸದರಿ ಫೋಟೊಗಳಲ್ಲಿ ನಾನು ಕಂಡುಬರುತ್ತೇನೆ. ಕಾರನ್ನು ಗುರುತಿಸುತ್ತೇನೆ. ಆ ದಿನ ಬಿಳಿ ಕಾರಿನಲ್ಲಿದ್ದ ವ್ಯಕ್ತಿಗಳು ಫೋಟೊಗಳಲ್ಲಿ ಕಂಡುಬರುವುದಿಲ್ಲ. ಪೊಲೀಸರು ಚೀಲ ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ಪಡೆದುಕೊಳ್ಳಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀಸವಾಲು ಸರ್ಕಾರಿ ಅಭಿಯೋಜಕರಿಂದಃ**

2. ದಿಃ 15–9–2020 ರಂದು ಬೆಳಿಗ್ಗೆ 6.50 ಘಂಟೆ ಸಮಯದಲ್ಲಿ ಪೊಲೀಸರು ನನ್ನನ್ನು ಮತ್ತು ಮೊಹಮದ ಇಕಬಾಲ–ಚಾಸಾ–4 ರವರನ್ನು ಠಾಣೆಗೆ ಕರೆಸಿದ್ದರು ಅಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ 1 ನೇ ಆರೋಪಿ ಮಾರುತಿ ಹರಿಣಶಿಕಾರಿ ಠಾಣೆಯಲ್ಲಿದ್ದನು ಅಂದರೆ ಸರಿಯಲ್ಲ. ಠಾಣೆಯಲ್ಲಿದ್ದ ಆರೋಪಿ ಮಾರುತಿ ನಮ್ಮ ಮುಂದೆ ತನಗೆ ಗಾಂಜಾ ಸಪ್ಲೆಯ ಮಾಡುವ ವ್ಯಕ್ತಿ ಮತ್ತು ಸ್ಥ,ಳ ತೋರಿಸುತ್ತೇನೆಂದು ನಮ್ಮ ಮುಂದೆ ಹೇಳಿದ್ದು, ನನ್ನನ್ನು , ಚಾಸಾ–4 ಮಹಮ್ಮದ ಮತ್ತು ಚಾಸಾ–10 ರಮೇಶ ರವರನ್ನು ಬಾಗಲಕೋಟೆ ರಸ್ತೆಯಲ್ಲಿರುವ ಗದ್ದನಕೇರಿ ಕ್ರಾಸ ಹತ್ತಿರ ಕರೆದುಕೊಂಡು ಹೋಗಿದ್ದು ಅಷ್ಟರಲ್ಲಿ ಮಹಾರಾಷ್ಟ್ರ ನೊಂದಣಿ ಸಂಖ್ಯೆ ಇರುವ ಬಿಳಿ ಕಾರ ಗದ್ದನಕೇರಿ ಕ್ರಾಸ ಹತ್ತಿರ ಬಂದಿದ್ದು 1 ನೇ ಆರೋಪಿ ಮಾರುತಿ ಇದೆ ಕಾರು ಎಂದು ನಮಗೆ ತಿಳಿಸಿದ್ದು , ಪೊಲೀಸರು ಸದರಿ ಕಾರನ್ನು ನಿಲ್ಲಿಸಿದ್ದು ಕಾರಿನಲ್ಲಿ 3 ನೇ ಆರೋಪಿ ಅಬ್ದುಲರಜಾಕ ಕಸಬಾರ ಕಾರಿನೊಳಗೆ ಇದ್ದನು ಅಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮದಲ್ಲಿ ಕಾರಿನ್ನು ಪರಿಶೀಲಿಸಲಾಗಿ ಕಾರಿನ ಡಿಕ್ಕಿನಲ್ಲಿರುವ ಗಾಂಜಾ ಗಿಡ ಮತ್ತು ಬೀಜಗಳು ಕಂಡುಬಂತು ಅಂದರೆ ಸರಿಯಲ್ಲ. ಸದರಿ ಗಿಡಗಳನ್ನು ಗಾಂಜಾ ಗಿಡ ಮತ್ತು ಬೀಜ ಎಂದು

ಪೊಲೀಸರು ಖಚಿತಪಡಿಸಿಕೊಂಡು ಚಾಸಾ–10 ರಮೇಶ ಅಮ್ಮಿನಬಾವಿ ರವರು ತಂದಿದ್ದ ತೂಕದ ಮಶೀನನಿಂದ ಅವುಗಳನುನ ತೂಕ ಮಾಡಲಾಗಿ ಅವುಗಳ ತೂಕ 1 ಕೆಜಿ 10 ಗ್ರಾಂ ಇತ್ತು ಅಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಸದರಿ ಗಾಂಜಾವನ್ನು ಅಮಾನತುಪಡಿಸಿಕೊಂಡು 100 ಗ್ರಾಂ ಗಾಂಜಾವನ್ನು ಪ್ರತ್ಯೇಕ ಪ್ಯಾಕನಲ್ಲಿ ಪ್ಯಾಕ ಮಾಡಿದರು ಅಂದರೆ ಸರಿಯಲ್ಲ. 3 ನೇ ಆರೋಪಿಯ ಸ್ವಾದೀನದಿಂದ 1500 ರೂ ಗಳು ಮತ್ತು ಒಂದು ಬಿಳಿ ಬಣ್ಣದ ಸ್ಯಾಮಸಂಗ ಮೊಬೈಲನ್ನು ಅಮಾನತು ಪಡಿಸಿಕೊಂಡು ರ ಅಂದರೆ ಸರಿಯಲ್ಲ. 3 ನೇ ಆರೋಪಿ ಇದ್ದ ಕಾರ ನಂ: ಎಂ ಎಚ್ –11–ಎ ಎನ್–2345 ವಾಹನವನ್ನು ಪೊಲೀಸರು ಅಮಾನತುಪಡಿಸಿಕೊಂಡರು ಅಂದರೆ ಸರಿಯಲ್ಲ. ಪೊಲೀಸರು 3 ನೇ ಆರೋಪಿತನಿಂದ ಅಮಾನತುಪಡಿಸಿಕೊಂಡ ಎಲ್ಲ ವಸ್ತುಗಳ ಬಗ್ಗೆ ಪಂಚನಾಮೆ ಬರೆದು ಸದರಿ ಪಂಚನಾಮಗೆ ಸ್ಥಳದಲ್ಲಿ ನನ್ನ ಸಹಿ ಪಡೆದಿದ್ದಾರೆ ಅಂದರೆ ಸರಿಯಲ್ಲ. ಪೊಲೀಸರು ಪಂಚನಾಮೆ ಕಾಲಕ್ಕೆ ತೆಗೆದ ಫೋಟೊದಲ್ಲಿ 3 ನೇ ಆರೋಪಿ ಅಬ್ದುಲ ರಜಾಕ ಕಂಡುಬರುತ್ತಾನೆ ಅಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ಶಾಮೀಲಾಗಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀಸವಾಲು ಆರೋಪಿತರ ಪರವಾಗಿ ವಕೀಲರಿಂದ:**

ಪಾಟಿ ಸವಾಲು ಇಲ್ಲ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಶ್ರೀಮತಿ ಕೆ.ಜಿ. ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.